ಅರ್ಜಿದಾರನು ಭಾದಿತನಾದಲ್ಲಿ ಅಪೀಲನ್ನು ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ರವರು ಚೇರ್‌ಮನ್‌ರಾಗಿರುವ ವೃಕ್ಷ ಪ್ರಾಧಿಕಾರಕ್ಕೆ ಸಲ್ಲಿಸಬಹುದು. ಈ ಅಧಿಕಾರವನ್ನು ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಕೊಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಸಿಂಧಗಿ ತಾಲ್ಲೂಕಿನ ದೇವಸ್ಥಾಗಳಿಗೆ ಆರಾಧನಾ ಯೋಜನೆಯ ಅಡಿ ಮಂಜೂರಾದ ಹಣ

948 (1523) - ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. 2000-2001ನೇ ಸಾಲಿನಲ್ಲಿ ಸಿಂಧಗಿ ತಾಲ್ಲೂಕಿನ ದೇವಸ್ಥಾನಗಳಿಗೆ ಮಂಜೂರಾದ ಹಣವೆಷ್ಟು? ಇನ್ನೂ ಬಿಡುಗಡೆ ಆಗಬೇಕಾದ ಹಣವೆಷ್ಟು?

2. 2001-2002ನೇ ಸಾಲಿನ ಆಯವ್ಯಯದಲ್ಲಿ ಸಿಂಧಗಿ ತಾಲ್ಲೂಕಿಗೆ ನಿಗಧಿ ಪಡಿಸಿರುವ ಹಣವೆಷ್ಟು?

3. ಈಗಾಗಲೇ ಬಿಡುಗಡೆ ಮಾಡಿರುವ ಹಣವು ಸಾಕಾಗುತ್ತಿಲ್ಲದಿದ್ದು ದೇವಸ್ಥಾನಗಳ ಜೀರ್ಣೋದ್ಧಾರ ಕೆಲಸಗಳಿಗೆ ಇನ್ನು ಹೆಚ್ಚಿನ ಅನುದಾನದ ಅವಶ್ಯವಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

4. ಅವಶ್ಯವಿರುವ ಅನುದಾನದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆ?

5. ಸಲ್ಲಿಸಿದ್ದರೆ, ಎಷ್ಟು ಹಣ ಕೋರಲಾಗಿದೆ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1. ಆರಾಧನಾ ಯೋಜನೆಯಡಿ ಹಣವನ್ನು ತಾಲ್ಲೂಕುವಾರು ಹಂಚಿಕೆ ಮಾಡಲಾಗುವುದಿಲ್ಲ. ವಿಧಾನ ಸಭಾ ಕ್ಷೇತ್ರವಾರು ಹಂಚಿಕೆ ಮಾಡಲಾಗುವುದು. 2000-2001 ನೇ ಸಾಲಿನಲ್ಲಿ ಸಿಂಧಗಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 1,95,652-00 ಗಳನ್ನು ಹಂಚಿಕೆ ಮಾಡಲಾಗಿರುವುದರಿಂದ ಸದರಿ ವರ್ಷದಲ್ಲಿ ಬಿಡುಗಡೆ ಆಗಬೇಕಾದ ಹಣ ಇರುವುದಿಲ್ಲ.

2. ಸಿಂಧಗಿ ತಾಲ್ಲೂಕಿಗೆ ಯಾವುದೇ ಹಣ ನಿಗಧಿಪಡಿಸಿರುವುದಿಲ್ಲ. ವಿಧಾನ ಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡಲಾಗಿದೆ.

3. - ಹೌದು ಬಂದಿದೆ -

4. ಇಲಾಖೆಯ ಬೇಡಿಕೆಯ ಮೇರೆಗೆ ಸರ್ಕಾರ 6 ಕೋಟಿ ಹಣವನ್ನು ಈ ಸಾಲಿನ ಅನುದಾನದಲ್ಲಿ ಒದಗಿಸಿದೆ.

5. ಆರಾಧನಾ ಯೋಜನೆಯಡಿ 2002-2003ರ ಆಯವ್ಯಯದಲ್ಲಿ ಇಡೀ ರಾಜ್ಯಕ್ಕೆ ರೂ. 12 ಕೋಟಿಗಳನ್ನು ಒದಗಿಸಲು ಕೋರಲಾಗಿದ್ದು, ರೂ 6 ಕೋಟಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ಶಿವಮೊಗ್ಗ ಜಿಲ್ಲೆ ತುಂಗಾ ನದಿಗೆ ಮಲೀನ ನೀರಿನಿಂದ ಪರಿಸರಕ್ಕೆ ಹಾನಿ

949 (385) - ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಶಿವಮೊಗ್ಗ ಜಿಲ್ಲೆ ತುಂಗಾ ನದಿಗೆ ಕಾರ್ಖಾನೆಗಳಿಂದ ಮಲೀನ ನೀರು ಹೊರಬರುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಇದರಿಂದ ಸಾರ್ವಜನಿಕರ, ಪಶುಪ್ರಾಣಿಗಳ, ಜಲಚರಗಳ ನಾಶಕ್ಕೆ ಅವಕಾಶವಾಗುವುದಿಲ್ಲವೆ, ಯಾವ ಕಾರ್ಖಾನೆಗಳಿಂದ ಸಂಸ್ಕರಿಸದ ಕೊಳಕು ನೀರು ರಾಸಾಯನಿಕ ಮಿಶ್ರಣಗಳು ನೀರಿನಲ್ಲಿ ಸೇರಿ ನೀರು ಕಲುಷಿತವಾಗುತ್ತಿದೆ. ಅಂತಹ ಘಟಕಗಳ ಮೇಲೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ, (ಕಾರ್ಖಾನೆಗಳ ಪಟ್ಟಿ ಒದಗಿಸುವುದು)

3. ಇದರ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿದ್ದು, ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಈ ಬಗ್ಗೆ ಸಾರ್ವಜನಿಕರಿಂದ ಯಾವುದೇ ತರಹದ ದೂರುಗಳು ಬಂದಿರುವುದಿಲ್ಲ.

ರಾಯಚೂರು ಥರ್ಮಲ್ ವಿದ್ಯುತ್ ಘಟಕದ ಬೂದಿ ಮಿಶ್ರಿತ ನೀರಿನಿಂದ ಆರೋಗ್ಯಕ್ಕೆ ಹಾನಿ

950 (387) - ಶ್ರೀ ಸುರೇಶ್ ಕುಮಾರ್. ಎಸ್. (ರಾಜಾಜಿನಗರ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಯಚೂರು ಥರ್ಮಲ್ ವಿದ್ಯುತ್ ಘಟಕದ ಬೂದಿ ಮಿಶ್ರಿತ ನೀರು ಕೃಷ್ಣ ನದಿಗೆ ಹರಿದು ನದಿ ನೀರು ಕಲುಷಿತವಾಗಿ ಆರೋಗ್ಯಕ್ಕೆ ಹಾನಿಯುಂಟಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಈ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಇ. ಸ್ಥಾವರದ ಈ ಬೂದಿ ನೀರು ವಿಷಯುಕ್ತ ರಾಸಾಯನಿಕಗಳಿಂದ ಕೂಡಿರುತ್ತದೆ ಎಂಬ ಅಂಶ ವೈಜ್ಞಾನಿಕ ಸಮೀಕ್ಷೆಗಳಿಂದ ದೃಡಪಟ್ಟಿದೆಯೇ?

ಈ. ಇದರಿಂದ ಈ ಭಾಗದ ಜನರ ಮೇಲೆ ಅನಾರೋಗ್ಯ ಪರಿಣಾಮಗಳನ್ನು ಉಂಟುಮಾಡಿದೆಯೇ? ಯಾವ ರೀತಿಯ ದುಷ್ಪರಿಣಾಮಗಳಾಗಿವೆ (ವಿವರ ನೀಡುವುದು)

ಉ. ಈ ಬೂದಿಯಲ್ಲಿ ಯಾವ ಯಾವ ರಾಸಾಯನಿಕಗಳು ಮಿಶ್ರಿತಗೊಂಡಿದೆ. ಇದರ ತಡೆಗೆ ಸರ್ಕಾರ ಕೈಗೊಂಡ ಕ್ರಮವೇನು?

ಊ. ಹಾನಿಗೊಳಗಾಗದಂತೆ ಮುಂಜಾಗ್ರತ ಕ್ರಮವನ್ನು ಕೈಗೊಳ್ಳದಿರಲು ಕಾರಣವೇನು?

ಶ್ರೀ ಕೆ.ಹೆಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ. ಹೌದು. ಇದು ಸಾರ್ವಜನಿಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಆ. ರಾಯಚೂರು ಥರ್ಮಲ್ ವಿದ್ಯುತ್ ಘಟಕವು ನದಿ ನೀರಿಗೆ ತ್ಯಾಜ್ಯವು ಸೇರುವುದನ್ನು ತಡೆಗಟ್ಟಲು ಶುದ್ಧೀಕರಿಸಿದ ತ್ಯಾಜ್ಯದ ಶೇಖರಣೆ ಮತ್ತು ಪುನರ್ ಬಳಕೆಗಾಗಿ ರೂ. 6.00 ಕೋಟಿ ವೆಚ್ಚದ ಯೋಜನೆಯನ್ನು ಹಮ್ಮಿಕೊಂಡಿರುತ್ತದೆ.

ಇ. ನೀರು ಮಿಶ್ರಿತ ಹಾರುಬೂದಿಯನ್ನು ವೈಜ್ಞಾನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಉಪಪ್ರಶ್ನೆ (ಉ) ರಲ್ಲಿ ಉತ್ತರಿಸಿರುವಂತೆ ರಾಸಾಯನಿಕಗಳನ್ನು ಒಳಗೊಂಡಿರುತ್ತದೆ.

ಈ. ಈ ಭಾಗದ ಜನರ ಮೇಲೆ ಅನಾರೋಗ್ಯ ಪರಿಣಾಮಗಳನ್ನು ಉಂಟುಮಾಡಿರುವುದರ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ.